## 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

## Spl.C.153/2023

ದಿಃ 04.01.2025

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-9 Pw-7

| | | |
|---|---|---|
| ಹೆಸರು | ಃ | ಡಾ. ಭರತ್ ಕೆ |
| ತಂದೆಯ ಹೆಸರು | ಃ | ಕೆಂಪಣ್ಣ |
| ವಯಸ್ಸು | ಃ | 36 ವರ್ಷ |
| ಉದ್ಯೋಗ | ಃ | ವೈದ್ಯಾಧಿಕಾರಿಗಳು,<br>ಭರತ್ ಕೆಂಪಣ್ಣ ಆಸ್ಪತ್ರೆ,<br>ಬಿಡದಿ |
| ವಾಸಸ್ಥಳ | ಃ | ಬಿಡದಿ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು ಕಳೆದ 3 ವರ್ಷಗಳಿಂದ ಸದರಿ ಭರತ್ ಕೆಂಪಣ್ಣ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ24.07.2023 ರಂದು, ಗಾಯಾಳು ಚಾಸಾ.1 ಈತನು ದಿಃ23.07.2023 ರಂದು ಹಲ್ಲೆಯ ಕಾರಣವನ್ನು ಹೇಳಿಕೊಂಡು ಬಂದಾಗ ಆತನನ್ನು ವೈದ್ಯಕೀಯವಾಗಿ ಪರೀಕ್ಷಿಸಿ ನೋಡಲಾಗಿ ಈ ಕೆಳಕಂಡ ಗಾಯಗಳನ್ನು ಕಂಡಿರುತ್ತೇನೆಃ

**ಎ)** ಆತನ ಬಲಕೆನ್ನೆಯ ಮೇಲೆ ಹರಿತದಿಂದ ಕೂಡಿದ ತರಚಿದ ಗಾಯವನ್ನು ಕಂಡಿರುತ್ತೇನೆ.

ಬಿ) ಆತನ ಬಲಗೈ ಬೆರಳುಗಳ ಮೇಲೆ

ಹರಿತದ ಗಾಯಗಳನ್ನು ಕಂಡಿರುತ್ತೇನೆ.

3. ಮೇಲೆ ಹೇಳಿದ ಗಾಯಗಳು ಸಾದಾ ಸ್ವರೂಪದ್ದವುಗಳಾಗಿದ್ದು, ಅವುಗಳಿಗನುಗುಣವಾಗಿ ಒಂದು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು, ಅದನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ, ಅದನ್ನು ನಿ.ಪಿ.12 ಎಂದು ಮತ್ತು ಅದರ ಮೇಲಿರುವ ನನ್ನ ಸಹಿಯನ್ನು ನಿ.ಪಿ.12(ಎ) ಎಂದು ಗುರುತಿಸಲಾಯಿತು.

4. ಈಗ ತೋರಿಸಿದ ಮು.ಮಾ.1 ರಿಂದ ಕೆನ್ನೆಯ ಮೇಲೆ ಹಲ್ಲೆ ನಡೆಸಿದಲ್ಲಿ ಮೇಲೆ ಹೇಳಿದ 1 ನೇ ಗಾಯ ಆಗುವ ಸಾಧ್ಯತೆ ಉಂಟು.

5. ಒಬ್ಬ ವ್ಯಕ್ತಿಗೆ ಕೆಳಗೆ ಬೀಳಿಸಿ ಎಳೆದಾಡಿದಾಗ ಮೇಲೆ ಹೇಳಿದ 2 ನೇ ಗಾಯ ಆಗುವ ಸಾಧ್ಯತೆ ಉಂಟು.

<u>ಪಾಟೀ ಸವಾಲುಃ ಶ್ರೀ. ಎಸ್.ಜಿ.ಎಸ್., ವಕೀಲರಿಂದ ಆರೋಪಿಗಳ ಪರವಾಗಿಃ</u>

6. ಚಾಸಾ.1 ಈತನು ಆದಿನ ನಮ್ಮಲ್ಲಿಗೆ ಬಂದಾಗ ತನ್ನ ಮೇಲೆ ಯಾರು ಮತ್ತು ಯಾವುದರಿಂದ ಮತ್ತು ಹೇಗೆ ಹಲ್ಲೆ ನಡೆಸಿರುತ್ತಾರೆ ಎಂದು ವಿವರಗಳನ್ನು ನೀಡಿರುವುದಿಲ್ಲ.

7. ಒಬ್ಬ ವ್ಯಕ್ತಿ ಚಲಿಸುವ ದ್ವಿಚಕ್ರ ವಾಹನ ಮೇಲಿಂದ ಬಿದ್ದಲ್ಲಿ ಮೇಲೆ ಹೇಳಿದ ಎರಡೂ ಗಾಯಗಳು ಆಗುವ ಸಾಧ್ಯತೆ ಉಂಟು ಎನ್ನುವುದು ಸರಿ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.